ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು -560 010

| ಇಂದ,<br>ಉಪ ಪ್ರಧಾನ ವ್ಯವಸ್ಥಾಪಕರು(ಸಮನ್ವಯ) | **ಆಂತರಿಕ ಕಛೇರಿ ಟಿಪ್ಪಣಿ** | ಗೆ,<br>**ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಡಳಿತ)** |
|---|---|---|

ಸಂಖ್ಯೆ:ಸಮನ್ವಯ:ಹಂಚಿಕೆ:ಪ್ರಕಟಣೆ:2024 ದಿನಾಂಕ 06-07-2024

**ವಿಷಯ:** **ನಿಗಮದ ಖುದಾಪುರ ಮತ್ತು ಉಳ್ಳಾರ್ತಿಕಾವಲ್ ಕೈಗಾರಿಕಾ ವಸಾಹತುಗಳಲ್ಲಿ ಲಭ್ಯವಿರುವ ನಿವೇಶನಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಲು ಕಾಲಾವಧಿ ವಿಸ್ತರಣೆಗಾಗಿ ಪತ್ರಿಕಾ ಪ್ರಕಟಣೆ ಬಗ್ಗೆ.**

ಉಲ್ಲೇಖ: ಸಂಬಂಧಪಟ್ಟ ಕಡತದಲ್ಲಿನ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ದಿನಾಂಕ 06.07.2024

-------

ವಿಷಯಕ್ಕೆ ಸಂಬಂಧಿಸಿದಂತೆ, ನಿಗಮದ ಖುದಾಪುರ ಮತ್ತು ಉಳ್ಳಾರ್ತಿಕಾವಲ್ ಕೈಗಾರಿಕಾ ವಸಾಹತುಗಳಲ್ಲಿ ಲಭ್ಯವಿರುವ ನಿವೇಶನಗಳ ಹಂಚಿಕೆಗಾಗಿ ಪತ್ರಿಕಾ ಪ್ರಕಟಣೆ ಹೊರಡಿಸಿ ದಿನಾಂಕ 29.06.2024 ರವರೆಗೆ ಈ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ಈಗ ಕಾಲಾವಕಾಶವನ್ನು ಪ್ರಸ್ತುತ ದಿನಾಂಕ **31.07.2024** ರವರೆಗೆ ವಿಸ್ತರಿಸಬೇಕಾಗಿರುತ್ತದೆ. ಆದ್ದರಿಂದ **ಈ ಹಿಂದೆ ಹೊರಡಿಸಿರುವ ದಿನಪತ್ರಿಕೆಗಳಲ್ಲಿ** ಈ ಪ್ರಕಟಣೆಯನ್ನು ದಿನಾಂಕ 07.07.2024 ರಂದು ಕನಿಷ್ಠ ಜಾಗದಲ್ಲಿ ಹೊರಡಿಸಲು ಕೋರಿದೆ. ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ಅನುಮೋದಿಸಿರುವ ಪತ್ರಿಕಾ ಪ್ರಕಟಣೆ ಪ್ರತಿ ಹಾಗೂ ನೋಟ್‌ಶೀಟ್ ಪ್ರತಿಗಳನ್ನು ಮಾಹಿತಿಗಾಗಿ ಈ ಪತ್ರಕ್ಕೆ ಅಡಕಗೊಳಿಸಿದೆ.

ಅಡಕ: ಮೇಲಿನಂತೆ

ಉಪ ಪ್ರಧಾನ ವ್ಯವಸ್ಥಾಪಕರು(ಸಮನ್ವಯ)

ಪ್ರತಿ:

ವ್ಯವಸ್ಥಾಪಕರು(ಇ.ಡಿ.ಪಿ), ಕರಾಸಕೈಅನಿನಿ, ಬೆಂಗಳೂರು ರವರು ಮೇಲ್ಕಂಡಂತೆ ಪತ್ರಿಕಾ ಪ್ರಕಟಣೆ ಹಾಗೂ ಅಧಿಕಾರಿಗಳ ಸಂಚಾರಿ ದೂರವಾಣಿ ಸಂಖ್ಯೆಯ ವಿವರಗಳನ್ನು ನಿಗಮದ ವೆಬ್‌ಸೈಟ್‌ನಲ್ಲಿ ತಪ್ಪದೆ ಈ ಕೂಡಲೇ ಅಳವಡಿಸಲು ಕೋರಲಾಗಿದೆ.

ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು -560 010

ಇ-ಮೇಲ್ : kssidcho@karnataka.gov.in ವೆಬ್‌ಸೈಟ್ : www.kssidc.co.in

ಸಂಖ್ಯೆ:ಸಮನ್ವಯ:ಮಳಿಗೆ:ನಿವೇಶನ:ಹಂಚಿಕೆ:ಪ್ರಕಟಣೆ:ಅವಧಿ ವಿಸ್ತರಣೆ:2024 ದಿನಾಂಕ:06-07-2024

**<u>ನಿಗಮದ ಖುದಾಪುರ ಮತ್ತು ಉಳ್ಳಾರ್ತಿಕಾವಲ್ ಕೈಗಾರಿಕಾ ವಸಾಹತುಗಳಲ್ಲಿ ಲಭ್ಯವಿರುವ ನಿವೇಶನಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಲು ಕಾಲಾವಧಿ ವಿಸ್ತರಣೆ ಪ್ರಕಟಣೆ</u>**

ನಿಗಮದ ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಲಭ್ಯವಿರುವ ಕೈಗಾರಿಕಾ ಮಳಿಗೆ / ನಿವೇಶನಗಳನ್ನು ಯಥಾಸ್ಥಿತಿಯಲ್ಲಿ ಹಂಚಿಕೆ ಮಾಡಲು, ಪ್ರಕಟಣೆ ಸಂಖ್ಯೆ: ಸಮನ್ವಯ:ತು.ವಿ:ಮಳಿಗೆ:ನಿವೇಶನ: ಹಂಚಿಕೆ:ಪ್ರಕಟಣೆ:2024/12, ದಿನಾಂಕ:01-03-2024 ರಂದು ಹೊರಡಿಸಿ, ಆಸಕ್ತ ಭಾವಿ ಉದ್ದಿಮೆದಾರರಿಂದ ಅರ್ಜಿ ಆಹ್ವಾನಿಸಿ, ಅರ್ಜಿ ಸಲ್ಲಿಸಲು ದಿನಾಂಕ 06.04.2024 ರವರೆಗೆ ನಿಗದಿಪಡಿಸಲಾಗಿತ್ತು ಹಾಗೂ ವಿವಿಧ ಕಾರಣಗಳಿಂದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಪ್ರಕಟಣೆ ಸಂಖ್ಯೆ:ಸಮನ್ವಯ:ಮಳಿಗೆ: ನಿವೇಶನ:ಹಂಚಿಕೆ: ಪ್ರಕಟಣೆ:ಅವಧಿ ವಿಸ್ತರಣೆ: 2024 ದಿನಾಂಕ: 12-06-2024 ರಂದು ಹೊರಡಿಸಿ ದಿನಾಂಕ 29-06-2024 ರವರೆಗೆ ವಿಸ್ತರಿಸಲಾಗಿತ್ತು. ಅದರಂತೆ, ಅರ್ಜಿಗಳು ಸ್ವೀಕೃತವಾಗಿರುತ್ತವೆ. ಚಿತ್ರದುರ್ಗ ಜಿಲ್ಲೆಯ ಖುದಾಪುರ ಕೈಗಾರಿಕಾ ವಸಾಹತು ಮತ್ತು ಉಳ್ಳಾರ್ತಿಕಾವಲ್ ಕೈಗಾರಿಕಾ ವಸಾಹತುಗಳಲ್ಲಿ ಲಭ್ಯವಿರುವ ನಿವೇಶನಗಳಿಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸಲು ಅನೇಕ ಭಾವಿ ಉದ್ದಿಮೆದಾರರು ಮನವಿ ಸಲ್ಲಿಸಿರುತ್ತಾರೆ. ಆದ್ದರಿಂದ, ಈ ಕೈಗಾರಿಕಾ ವಸಾಹತುಗಳಲ್ಲಿ ಲಭ್ಯವಿರುವ ಈ ನಿವೇಶನಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸುವ ದಿನಾಂಕವನ್ನು **<u>31.07.2024 ರ ಸಂಜೆ 05 ಗಂಟೆಯವರೆಗೆ</u>** ಪುನ: ವಿಸ್ತರಿಸಲಾಗಿರುತ್ತದೆ.

ಈ ಹಿಂದಿನ ಹಂಚಿಕೆ ಪ್ರಕಟಣೆಗಳಲ್ಲಿ, ನಮೂದಿಸಲ್ಪಟ್ಟಿರುವ ಹಂಚಿಕೆ ನಿಯಮ, ನಿಬಂಧನೆ, ಮಳಿಗೆ/ನಿವೇಶನಗಳ ದರ, ಸಹಾಯಧನ ಇತ್ಯಾದಿಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ಹತ್ತಿರದ ಶಾಖಾ / ವಿಭಾಗೀಯ ಕಛೇರಿ ಅಥವಾ ಪ್ರಧಾನ ಕಛೇರಿಯನ್ನು ಸಂಪರ್ಕಿಸಬಹುದು ಹಾಗೂ ನಿಗಮದ ವೆಬ್‌ಸೈಟ್ <u>www.kssidc.co.in</u> ನಲ್ಲಿಯೂ ವೀಕ್ಷಿಸಬಹುದಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು